ಹೃದಯಗಳಿಂದ ಪ್ರತಿಫಲಿಸುವವರು ಮಾತ್ರ ನಮಗೆ ಬೆಳಕನ್ನು ತರಬಲ್ಲರು!

**◆ ಯಾವುದೇ ಯುದ್ಧದ ಮೊದಲ ಹಾಗೂ ಅಂತಿಮ ಬಲಿಪಶುಗಳೆಂದರೆ ಮಕ್ಕಳು ಮತ್ತು ಮಹಿಳೆಯರು. ನನಗೆ ಇತ್ತೀಚಿನ 'ರಫಾ' ದುರಂತ ನೆನಪಾಗ್ತಿದೆ. ಇದರ ಕುರಿತು ಹೇಳಿ?**

ನಿಜ ಹೇಳಬೇಕೆಂದರೆ 'ರಫಾ' ಎಂಬುದು ಈಗ ಉಳಿದಿಲ್ಲ. ಅದೀಗ ಕೇವಲ ರಾಶಿರಾಶಿ ಅವಶೇಷಗಳ ಗುಡ್ಡ ಅಷ್ಟೇ. ಮನೆಗಳು ನೆಲಕಚ್ಚಿವೆ, ಬೀದಿಗಳು ದೂಳಿನ ಗುಡ್ಡಗಳಾಗಿವೆ. ಎಲ್ಲವೂ ನಾಶವಾಗಿದೆ. ಕೆಲಸವೇ ಇಲ್ಲ. ಜನರು ಮಾನವೀಯ ಸಹಾಯಕ್ಕಾಗಿ ಹಾತೊರೆದು ಕಾಯುತ್ತಿದ್ದಾರೆ. ಆದರೆ ಆ ಯಾವ ಸಹಾಯವೂ ತಲುಪದಂತೆ ಕೆಲವೊಮ್ಮೆ ಇಸ್ರೇಲಿ ಸೇನೆ ಗಡಿಯನ್ನು ಮುಚ್ಚಿಬಿಡುತ್ತದೆ.

ನಾನು ಅಲ್ಲಿದ್ದ ಮಕ್ಕಳ ಕಣ್ಣುಗಳಲ್ಲಿ ಖಾಲಿತನ ಕಂಡಿದ್ದೇನೆ. ಅವರು ಶಾಲೆಗೆ ಹೋಗಬೇಕಾಗಿತ್ತು. ಆದರೆ, ತಮ್ಮದೇ ಊರಿನ ಅವಶೇಷಗಳಲ್ಲಿ ಆಟವಾಡುವುದು ಅವರ ದಿನಚರಿಯಾಗಿದೆ. ತಾಯಂದಿರು ತಮ್ಮ ಬತ್ತಿದ ಎದೆಗೆ ಮಗು ಅಂಟಿಸಿಕೊಂಡು, ಹಾಲಿನ ಪುಡಿ ತರುವುದಕ್ಕಾಗಿ ಗಂಟೆಗಳ ಕಾಲ ಗಡಿಯ ಬಳಿ ಕಾಯುತ್ತಾ ನಿಂತಿರುತ್ತಾರೆ. ಕುಡಿಯುವ ನೀರು ಬೇಕೆಂದರೆ ಕಿಲೋಮೀಟರ್‌ಗಟ್ಟಲೇ ಹೋಗಬೇಕು. ಆದರೆ ಅನೇಕ ಬಾರಿ, ಇಸ್ರೇಲಿ ಸೇನೆ ಗಡಿಯನ್ನು ನಿರ್ದಯವಾಗಿ ಮುಚ್ಚಿಬಿಡುತ್ತದೆ. ಎಂದೆಂದಿಗೂ ಮುಗಿಯದ ಆ ಹುಸಿನಿರೀಕ್ಷೆಯೇ ಮರಣದಂತೆ ಬದಲಾಗುತ್ತದೆ.

ಒಮ್ಮೆ 2024ರ ದಾಳಿಯಲ್ಲಿ ರಫಾದಲ್ಲಿದ್ದ ಒಬ್ಬ ದಿನಗೂಲಿ ಕಾರ್ಮಿಕನನ್ನು ನಾನು ಭೇಟಿಯಾದೆ. ಅವನು ಹೇಳಿದ 'ನನ್ನ ಕೈಗಳು ಕಲ್ಲು ಕಟೆಯಲೆಂದೇ ಹುಟ್ಟಿದ್ದವು. ಆದರೆ, ಇವತ್ತು ಅವು ಬೇರೆಯವರ ಶವಗಳನ್ನು ಹೆಕ್ಕಿಹೆಕ್ಕಿ ತೆಗೆಯುತ್ತಿವೆ' ಎಂದು. ಇಂತಹ ನೂರಾರು ಘಟನೆಗಳು ಪ್ರತಿದಿನ ನಮ್ಮನ್ನು ಮಾನಸಿಕವಾಗಿ ಕುಗ್ಗಿಸುತ್ತಿವೆ.

ಹೀಗೆ ಎಲ್ಲವೂ ನಾಶವಾದರೂ ಕೂಡ ಜನರು ರಫಾ ಬಿಟ್ಟು ಹೊರಟು ಹೋಗಲು ಸಿದ್ಧರಿಲ್ಲ. ಏಕೆಂದರೆ ಇದು ನಮ್ಮ ನೆಲ, ನಮ್ಮ ಪೂರ್ವಜರ ನೆನಪು. ನನ್ನನ್ನು ಸೇರಿದಂತೆ ಹಲವರ ನಂಬಿಕೆ ಎಂದರೆ 'ನಮ್ಮಿಂದ ನೆಲವನ್ನು ಕಿತ್ತುಕೊಳ್ಳಬಹುದು, ಆದರೆ ನೆಲದ ಮೇಲೆ ಇರುವ ನಮ್ಮ ಹಕ್ಕನ್ನು ಕಿತ್ತುಕೊಳ್ಳಲು ಸಾಧ್ಯವಿಲ್ಲ'. ಅನೇಕ ಕುಟುಂಬಗಳಿಗೆ ಬೇರೆಡೆ ಹೋಗುವುದು ಅರ್ಥವೇ ಇಲ್ಲದ ಮಾತು. ಆ ನಿರಾಶ್ರಿತ ಶಿಬಿರಗಳಲ್ಲಿ ಬದುಕುವ ನೋವನ್ನು ನಮ್ಮ ಹಿರಿಯರು ನೋಡಿದ್ದಾರೆ. ಅದೇ ರೀತಿಯ ಬದುಕು ತಮ್ಮ ಮಕ್ಕಳಿಗೆ ಬರಬಾರದೆಂಬ ಕಾಳಜಿಯಿಂದ ಇಲ್ಲೇ ಉಳಿಯಲು ತೀರ್ಮಾನಿಸಿದ್ದಾರೆ. ಅವರಿಗೆ ಬದುಕಲು ಬೇಕಾದ ಆಹಾರ, ನೀರು, ಔಷಧ ಯಾವುದೂ ತಲುಪದಂತೆ ಬಾಗಿಲುಗಳು ಮುಚ್ಚಲ್ಪಟ್ಟಿವೆ. ಈ ಎಲ್ಲದರ ಮಧ್ಯೆ ಅವರು ಮಾನವೀಯ ಸಹಾಯದ ನಿರೀಕ್ಷೆಯಲ್ಲೇ ಜೀವನವನ್ನು ಸಾಗಿಸುತ್ತಿದ್ದಾರೆ.

2024 ಮೇ ತಿಂಗಳಲ್ಲಿ ರಫಾದ ನಿರಾಶ್ರಿತರ ಶಿಬಿರವನ್ನು ಗುರಿಯಾಗಿಸಿ ನಡೆದ ಇಸ್ರೇಲಿ ಏರ್ ಸ್ಟ್ರೈಕ್‌ನಲ್ಲಿ ಕನಿಷ್ಠ 45 ಜನ ಸಾವನ್ನಪ್ಪಿದರು. ಅದಾದ ಮೇಲೆ 'ಆಲ್ ಐಸ್ ಆನ್ ರಫಾ' ಎಂಬ ಹ್ಯಾಷ್ ಟ್ಯಾಗ್ ಅಡಿಯಲ್ಲಿ AI ಮೂಲಕ ರಚಿಸಲಾದ ಚಿತ್ರವು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಯಿತು. ಇದು 50 ಮಿಲಿಯನ್ ಬಾರಿ ಹಂಚಿಕೊಳ್ಳಲ್ಪಟ್ಟಿತು.

**◆ ಈ ಕರಾಳ ಯುಗದಲ್ಲಿ (ಇಸ್ರೇಲ್ - ಪ್ಯಾಲೆಸ್ತೀನ್ ಯುದ್ಧ) ಕಾವ್ಯ ಅಥವಾ ಯಾವುದೇ ಕಲೆ ಇನ್ನೂ ಔಷಧಿಯಾಗಿ ಉಳಿದಿದೆ ಅನ್ನಿಸುತ್ತಾ? ಅಥವಾ ಇದು ಭ್ರಮಾತ್ಮಕ ಸೌಂದರ್ಯದ ನೆಪದಲ್ಲಿ ಜನರು ವಾಸ್ತವದಿಂದ ತಪ್ಪಿಸಿಕೊಳ್ಳಲು ಅನುವು ಮಾಡಿಕೊಡುವ ಅರಿವಳಿಕೆ ಮದ್ದಾಗಿದೆಯಾ?**

ಕಾವ್ಯವು ನನಗೆ ಯುದ್ಧದ ಆಘಾತದಿಂದ ತಪ್ಪಿಸಿಕೊಳ್ಳಲು ಇರುವ ದಾರಿ. ಅದು ನನ್ನ ಮನಸ್ಸಿಗೆ ಒಮ್ಮೆಯಾದರೂ ನೆಮ್ಮದಿಯ ಕೊಠಡಿಯಾಗಿ, ನನ್ನ ಜಗತ್ತನ್ನು ಹೊಸಗಣ್ಣಿನಿಂದ ಕಾಣುವ ಕಿಟಕಿಯಾಗಿ ಪರಿಣಮಿಸುತ್ತದೆ. ಅಲ್ಲಿ ನಾನು ಮಹಿಳೆಯರ ನೋವು- ನಲಿವಿನ ಕಥೆಗಳನ್ನು ಹೆಣೆಯುತ್ತೇನೆ. ಮುಗ್ಧ ಜನರಿಗೆ ಅದರಲ್ಲೂ ವಿಶೇಷವಾಗಿ ಮಕ್ಕಳಿಗಾಗಿ ಕನಸಿನಂತಹ ಕವಿತೆಗಳನ್ನು ಬರೆಯುತ್ತೇನೆ. ●